# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1852 (2138) |
| ಮಾನ್ಯ ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 25-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಅವಶ್ಯಕತೆ ಇರುವ ಭೂಮಿಯ ಮಾಲೀಕರು ಮಾರಾಟ ಮಾಡುವುದಕ್ಕಾಗಿ ಸರ್ಕಾರದ ವತಿಯಿಂದ ಯಾವುದೇ ಹಸ್ತಕ್ಷೇಪವಿಲ್ಲದೆ ನೇರ ಭೂಮಾಲೀಕ ಮತ್ತು ಖರೀದಿದಾರರ ನಡುವೆ ಬೆಲೆ ನಿಷ್ಕರ್ಷ ಮಾಡಿಕೊಳ್ಳಲು ಕಂಪ್ಯೂಟರ್ ಆನ್‌ಲೈನ್ ಪ್ಲಾಟ್ ಫಾರ್ಮ್‌ನ್ನು ಸಿದ್ಧಪಡಿಸಲು ಸರ್ಕಾರ ಪ್ರಯತ್ನ ಮಾಡಿದೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಪ್ರಯತ್ನಗಳೇನು/ ಅಭಿಪ್ರಾಯಗಳೇನು: | ಅವಶ್ಯಕತೆ ಇರುವ ಭೂಮಿಯ ಮಾಲೀಕರು ಮಾರಾಟ ಮಾಡುವುದಕ್ಕಾಗಿ ಸರ್ಕಾರದ ವತಿಯಿಂದ ಯಾವುದೇ ಹಸ್ತಕ್ಷೇಪವಿಲ್ಲದೆ ನೇರ ಭೂಮಾಲೀಕ ಮತ್ತು ಖರೀದಿದಾರರ ನಡುವೆ ಬೆಲೆ ನಿಷ್ಕರ್ಷ ಮಾಡಿಕೊಳ್ಳಲು ಕಂಪ್ಯೂಟರ್ ಆನ್‌ಲೈನ್ ಪ್ಲಾಟ್ ಫಾರ್ಮ್‌ನ್ನು ಸಿದ್ಧಪಡಿಸುವ ಉದ್ದೇಶ ಇರುವುದಿಲ್ಲ. |
| ಆ | ವಸತಿ ನಿವೇಶನ, ವಾಣಿಜ್ಯ ನಿವೇಶನ, ಕೈಗಾರಿಕಾ ನಿವೇಶನ ಹಾಗೂ ಇತ್ಯಾದಿ ರೀತಿಯ ಅಗತ್ಯತೆಗಳೊಳಗೊಂಡಂತೆ ಖರೀದಿ ಪ್ರಕ್ರಿಯೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳ ಹಸ್ತಕ್ಷೇಪವಿಲ್ಲದಂತೆ ಭೂಮಾಲೀಕನಿಗೆ ಗರಿಷ್ಠ ಬೆಲೆ ದೊರಕಿಸಿಕೊಡಲು ಸರ್ಕಾರ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲದಿದ್ದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿಯಾಗುತ್ತಿರುವುದಕ್ಕೆ ಕಾರಣಗಳೇನು; (ಭೂಮಿಗೆ ಸಂಬಂಧಿಸಿದಂತೆ ಮಾತ್ರ) | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು ಗೃಹ/ ನಿವೇಶನ ವಲಯವನ್ನು ನಿಯಂತ್ರಿಸಲು ಮತ್ತು ಸಂದರ್ಭಾನುಸಾರ ಪ್ಲಾಟ್, ಅಪಾರ್ಟ್‌ಮೆಂಟ್ ಅಥವಾ ಕಟ್ಟಡದ ಮಾರಾಟ ಅಥವಾ ರಿಯಲ್ ಎಸ್ಟೇಟ್ ಪ್ರಾಜೆಕ್ಟ್‌ಗಳ ಮಾರಾಟವನ್ನು ದಕ್ಷ ಮತ್ತು ಪಾರದರ್ಶಕ ರೀತಿಯಲ್ಲಿ ಖಚಿತಪಡಿಸಿಕೊಳ್ಳಲು ಮತ್ತು ರಿಯಲ್ ಎಸ್ಟೇಟ್ ವಲಯದಲ್ಲಿ ಗ್ರಾಹಕರ ಹಿತಾಸಕ್ತಿಯನ್ನು ರಕ್ಷಿಸಲು ಮತ್ತು ತ್ವರಿತ ವಿವಾದ ಪರಿಹಾರಕ್ಕಾಗಿ ತೀರ್ಪು ನೀಡುವ ಕಾರ್ಯ ವಿಧಾನವನ್ನು ರೂಪಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ.<br><br>ರೇರಾ ಕಾಯ್ದೆ 2016ರ ಕಲಂ 3(2) ರನ್ವಯ 500 ಚ.ಮೀ.ಗಿಂತ ಹೆಚ್ಚಿನ ವಿಸ್ತೀರ್ಣವುಳ್ಳ ಬಡಾವಣೆ ರಚನೆ ಹಾಗೂ 8 ಮನೆಗಳಿಗಿಂತ ಹೆಚ್ಚು ವಸತಿ ಸಮುಚ್ಚಯಗಳನ್ನು ಒಳಗೊಂಡ ಎಲ್ಲಾ 3 ಯೋಜನೆಗಳಿಗೆ ರೇರಾ ನೋಂದಣಿ ಕಡ್ಡಾಯ ಮಾಡುವುದು ಹಾಗೂ ನಿಯಂತ್ರಿಸುವುದು ಇದರ ಉದ್ದೇಶ ಹಾಗೂ ಕಾರ್ಯವ್ಯಾಪ್ತಿಯಾಗಿದೆ. |
| ಇ | ರಿಯಲ್ ಎಸ್ಟೇಟ್ ಉದ್ಯಮವೆಂದರೇನು; ರಾಜ್ಯದಲ್ಲಿ ಇದು ಯಾವ ರೀತಿಯಲ್ಲಿ ನಡೆದುಕೊಂಡು ಬಂದಿದೆ; ನಿವೃತ್ತ ಹಿರಿಯ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಕಪ್ಪು ಹಣವುಳ್ಳ ದಂಧೆಕೋರರಿಂದ ಸದರಿ ಕ್ಷೇತ್ರವನ್ನು ಮುಕ್ತಗೊಳಿಸಲು ಸರ್ಕಾರದ ಪ್ರಯತ್ನಗಳೇನು? (ಮಾಹಿತಿ ಒದಗಿಸುವುದು) | |

| | | | |
|---|---|---|---|
| | | | ರೇರಾ ಕಾಯ್ದೆಯನ್ನು ಉಲ್ಲಂಘಿಸಿದವರ ವಿರುದ್ಧ ಪ್ರಾಧಿಕಾರದಲ್ಲಿ ದೂರನ್ನು ದಾಖಲಿಸಲು ಸದರಿ ಕಾಯ್ದೆಯ ಕಲಂ 31ರಲ್ಲಿ ಅವಕಾಶವಿದ್ದು, ಉಲ್ಲಂಘನೆ ಮಾಡಿದವರ ವಿರುದ್ಧ ಕೈಗೊಳ್ಳಬಹುದಾದ ಕ್ರಮಗಳನ್ನು ಕಲಂ 59, 63 & 65ರಲ್ಲಿ ವಿವರಿಸಲಾಗಿದೆ. ಅದರಂತೆ ಪ್ರಾಧಿಕಾರದಲ್ಲಿ ಕ್ರಮವಹಿಸಲಾಗುತ್ತಿದೆ. |

ಕಂಇ/117/ಎಂಎನ್‌ಎಸ್‌ಎ/2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು